# ಮಿಸೆಸ್ ಜೆನೆಲಿಯಾ!



**ಬಾ**ಲಿವುಡ್‌ನಲ್ಲಿ ಭಾರೀ ಸುದ್ದಿ ಮಾಡಿದ ಮೂವರು ಮಂಗಳೂರು ಮೂಲದ ಬೆಡಗಿಯರಲ್ಲಿ ಈ ಜೆನೆಲಿಯಾ ಮೂರನೆಯವಳು. ಮೊದಲಿಬ್ಬರಾದ ಐಶ್ವರ್ಯ ರೈ ಮತ್ತು ಶಿಲ್ಪಾ ಶೆಟ್ಟಿ ಇಬ್ಬರೂ ಮದುವೆಯಾಗಿ; ಒಬ್ಬಳಿಗೆ ಮಗುವಾಗಿ, ಇನ್ನೊಬ್ಬಳು ಗರ್ಭಿಣಿಯಾಗಿ.. ಈಗ ಮೂರನೆಯ ಹುಡುಗಿ ಜೆನೆಲಿಯಾ ಡಿಸೋಜಾ ಕೂಡಾ ಕತ್ತಿಗೆ ತಾಳಿ ಕಟ್ಟಿಸಿಕೊಂಡಿದ್ದಾಳೆ. ಐಶ್ವರ್ಯ ಸಿನಿಮಾ ಕುಟುಂಬಕ್ಕೆ ಸೊಸೆಯಾದರೆ, ಶಿಲ್ಪಾ ಉದ್ಯಮ ಕುಟುಂಬಕ್ಕೆ ಸೊಸೆಯಾದಳು. ಆದರೆ ಜೆನೆಲಿಯಾ ಪ್ರತಿಷ್ಠಿತ ರಾಜಕೀಯ ಕುಟುಂಬದ ಸೊಸೆಯಾಗಿದ್ದಾಳೆ. ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ, ಕೇಂದ್ರ ಸಚಿವ ವಿಲಾಸ್‌ರಾವ್ ದೇಶ್‌ಮುಖ್‌ರ ಮಗ ರಿತೇಶ್ ದೇಶ್‌ಮುಖ್ ಜೆನೆಲಿಯಾ ಕೈಹಿಡಿದಾತ.

2003ರಿಂದಲೂ ಜೆನಿ ಮತ್ತು ರಿತೇಶ್ ನಡುವಣ ಗೆಳೆತನ ಸುದ್ದಿಯಾಗುತ್ತಲೇ ಇತ್ತು. 'ತುಜೆ ಮೇರಿ ಕಸಂ' ಎಂಬ ಚಿತ್ರದಲ್ಲಿ ಅವರಿಬ್ಬರೂ ಒಟ್ಟಿಗೇ ನಟಿಸಿದ್ದು ಆ ಸುದ್ದಿಗೆ ಕಾರಣ. ಆಗಿನ್ನೂ ಜೆನಿ ಕಾಲೇಜು ವಿದ್ಯಾರ್ಥಿನಿ. ಸಿನಿಮಾ ಅಷ್ಟಾಗಿ ಓಡಲಿಲ್ಲ. ಆದರೆ ಅದೇ ವೇಳೆಗೆ ತೆಲುಗಿನ 'ಬಾಯ್ಸ್' ಎಂಬ ಚಿತ್ರ ಜೆನಿಗೆ ಭಾರೀ ಖ್ಯಾತಿ ತಂದುಕೊಟ್ಟಿತು. ಅಲ್ಲಿಂದ ಟಾಲಿವುಡ್‌ನಲ್ಲಿ ಜೆನಿ ಬೇಡಿಕೆಯ ನಟಿಯಾದಳು. 2 ವರ್ಷದ ಬಳಿಕ 'ಬೊಮ್ಮರಿಲ್ಲು' ಚಿತ್ರದ ನಟನೆ ಆಕೆಗೆ ಫಿಲಂಫೇರ್ ಪ್ರಶಸ್ತಿಯನ್ನೂ ತಂದುಕೊಟ್ಟಿತು. ಈ ಚಿತ್ರ ತಮಿಳು, ತೆಲುಗಿನಲ್ಲೂ ಮಿಂಚಿ, ಜೆನ್ನಿ ಕನ್ನಡಕ್ಕೂ ಬಂದು ಹೋದಳು. ಜತೆಗೆ ಮಲಯಾಳಂ, ಹಿಂದಿಯಲ್ಲೂ ಬೇಡಿಕೆ ಕುದುರಿತು. ರಿತೇಶ್ ಜತೆಗೆ ಓಡಾಟ ಹೆಚ್ಚಾದಾಗ, ಪತ್ರಕರ್ತರು ಕೇಳಿದರೆ, 'ಜಸ್ಟ್ ಫ್ರೆಂಡ್ಸ್' ಎಂಬ ಮುಗುಳ್ನಗೆಯ ಉತ್ತರ ಸಿದ್ಧವಿತ್ತು!

ಹಾಗೆ ನೋಡಿದರೆ ಇವರಿಬ್ಬರ ಮದುವೆ 3–4 ವರ್ಷಗಳ ಹಿಂದೆಯೇ ಆಗುವ ಸುದ್ದಿಯಿತ್ತು. ಆದರೆ ಮುಖ್ಯಮಂತ್ರಿಯಾಗಿದ್ದ ಅಪ್ಪ ವಿಲಾಸರಾವ್ ಒಪ್ಪಲಿಲ್ಲವಂತೆ. ಈಗ ಎರಡೂ ಕುಟುಂಬಗಳ ಸಮ್ಮುಖದಲ್ಲಿ ಮದುವೆ ಮುಗಿದಿದೆ. ಆರಂಭದಲ್ಲಿ ಪಾರ್ಕರ್ ಪೆನ್ ಜಾಹೀರಾತಿನಲ್ಲಿ ಅಮಿತಾಭ್ ಬಚ್ಚನ್ ಜತೆ ನಟಿಸಿದ್ದ ಈ ಚಿಗರೆ ಕಂಗಳ ಪೋರಿ, 8 ವರ್ಷಗಳಲ್ಲಿ ಐದು ಭಾಷೆಗಳ 38ಕ್ಕೂ ಹೆಚ್ಚು ಚಿತ್ರಗಳಲ್ಲಿ ಮಿಂಚಿದ್ದು ದೊಡ್ಡ ಸಾಧನೆಯೇ.

ಮದುವೆಯಂತೂ ಮುಗಿಯಿತು. ಇನ್ನು ನಟನೆ? ಪ್ರಶ್ನಿಸುವಂತಿಲ್ಲ. ಯಾಕೆಂದರೆ ಆಕೆ ನಟಿಸುತ್ತಿರುವ ನಾಲ್ಕು ಚಿತ್ರಗಳ ಶೂಟಿಂಗ್ ಇನ್ನೂ ಮುಗಿದಿಲ್ಲ. ಬಹುಶಃ ಅವುಗಳ ಶೂಟಿಂಗ್ ಮುಗಿಸಿದ ಬಳಿಕ ಈಕೆ ಫುಲ್‌ಟೈಂ ಗೃಹಿಣಿ ಆಗಬಹುದೇನೋ.

■ ಬಿಂದು


